**ಅವರ ಅನೇಕ ಕತೆಗಳನ್ನು, ಅವು ಓದುಗನಲ್ಲಿ ಉದ್ದೀಪಿಸುವ ಗಾಢ ಸಂವೇದನೆಯ ನೆಲೆಯಲ್ಲಿ ಕಾದಂಬರಿಗಳೆಂದೇ ಪರಿಗಣಿಸುವುದು ಸೂಕ್ತವೇನೋ. ಸದ್ಯದ ಸಂಕಲನದಲ್ಲಿಯೂ 'ಚುಕ್ಕಿ ಮದುವೆ ಪ್ರಸಂಗ' ಮತ್ತು 'ಶಾಂತಿ ಕುಟೀರ' ಎರಡೂ ಕಿರು ಕಾದಂಬರಿಗಳೇ.**

ಒಬ್ಬಿಬ್ಬರಷ್ಟೇ. ಹಿರಿಯ ಸ್ವಾಮಿಯನ್ನು ಮೂಲೆಗುಂಪಾಗಿಸಿ ಮೆರೆಯುತ್ತಿರುವ ಮಠದ ಕಿರಿಯ ಸ್ವಾಮಿಯಾಗಲಿ, ಊರ ಗೌಡನ ಮಗನ ಬೆಂಬಲ ಇರುವ ಕ್ರಿಮಿನಲ್ ಶಿವ್ರಾಜನಾಗಲಿ, ಒಟ್ಟಾರೆ ಜನಮರುಳೋ ಜಾತ್ರೆ ಮರುಳೋ ಎಂಬಂತೆ ತೊಡಗಿರುವ, ರಾಜಕೀಯ ನಾಯಕರ ವೇದಿಕೆಯೇ ಕೇಂದ್ರವಾಗಿರುವ ಈ ಸಾಮೂಹಿಕ ವಿವಾಹದ ಮಹಾಸಂಭ್ರಮವಾಗಲಿ ನರಸವ್ವನ ಎಣಿಕೆಗೆ, ನಿಯಂತ್ರಣಕ್ಕೆ ಮೀರಿದ ಸಂಗತಿಗಳು. ಚುಕ್ಕಿಯ ಮದುವೆ ಕೊನೆಗೂ ಆಯಿತೇ, ಯಾರೊಂದಿಗೆ ಆಯಿತು ಎನ್ನುವುದು ಇಲ್ಲಿ ಕತೆ ಮಾತ್ರ. ಆದರೆ ಇಡೀ ಕತೆಯ ಗುರುತ್ವ, ಮಹತ್ವ ಇರುವುದು ಅದರಲ್ಲಲ್ಲ. ಮನುಷ್ಯನ ಆಸೆ, ಅಸಹಾಯಕತೆ ಮತ್ತು ಒಳಿತು ಕೆಡುಕಿನ ಜಿಜ್ಞಾಸೆ ಈ ಕತೆಯ ಕೇಂದ್ರ ಬಿಂದು. ಇಲ್ಲಿ ಶಿವ್ರಾಜ ಯಾಕೆ ಬೇಡ ಎನ್ನುವ ಪ್ರಶ್ನೆ ಇರುವಂತೆಯೇ ಚುಕ್ಕಿಯ ಮನಸ್ಸಿನಲ್ಲಿ ಸ್ಥಾನ ಪಡೆದ ಹಜರೇಶನಿದ್ದಾನೆ. ಅವನು ಅನ್ಯಕೋಮಿನವನು ಎನ್ನುವುದು ವರ್ತಮಾನದಲ್ಲಿ ಮುಖ್ಯವಾಗುವುದು ಕಾಲಧರ್ಮದಿಂದಷ್ಟೆ. ನರಸವ್ವನ ಅವಸರದ ಆಯ್ಕೆಯಾದ ಅಂಜನಪ್ಪನ ಮಗ ಭೀಮೇಶನೂ ಇದ್ದಾನೆ. ಅವನು ದೃಢಕಾಯನಾದರೂ ಪುಕ್ಕಲ. ಈ ಎಲ್ಲ ಆಯ್ಕೆಗಳ ಹಿಂದೆಯೂ ಅವರವರ ಸಣ್ಣಪುಟ್ಟ ಆಸೆ, ಹಪಹಪಿಕೆಗಳಿರುವಂತೆಯೇ ಅಸಹಾಯಕತೆಯೂ ಇದೆ ಎನ್ನುವುದನ್ನು ಸೂಕ್ಷ್ಮವಾಗಿ ಗಮನಿಸಿದರೆ ನಮಗೇ ಅರಿವಾಗುತ್ತದೆ. ಹಜರೇಶ ಕೂಡಾ ಚುಕ್ಕಿಯ ಪ್ರಿಯತಮನೇನಲ್ಲ. ಭೀಮೇಶ ಕೂಡಾ ಕೆಟ್ಟ ಆಯ್ಕೆಯಲ್ಲ. ಶಿವ್ರಾಜನನ್ನು ಬೇಡವೇ ಬೇಡ ಎನ್ನಲು ಈರವ್ವನಿಗೇ ಮನಸ್ಸಿಲ್ಲ. ತಮಾಶೆ ಎಂದರೆ ಸ್ವತಃ ಚುಕ್ಕಿಗಾಗಿ ಹಲವರನ್ನು ಬೆದರಿಸಿ, ಗೂಂಡಾಗಿರಿ ಮಾಡಿ, ಗದ್ದಲವೆಬ್ಬಿಸುವ ಶಿವ್ರಾಜನಿಗೂ ಚುಕ್ಕಿಗಿಂತ ಒಂದೆಲೆ ಆಟ ಮುಖ್ಯವೆನಿಸುವುದು! ಇನ್ನು ಮಠದ ರಾಜಕಾರಣ, ಭ್ರಷ್ಟತೆಯನ್ನು ಗಮನಿಸಿದರೆ ಈ ಕತೆಯ ಮತ್ತೊಂದೇ ಆಯಾಮ ತೆರೆದುಕೊಳ್ಳುತ್ತದೆ. ಹಾಗೆಯೇ ಇಡೀ ಊರಿಗೆ ಊರೇ, ಜಾತಿ–ಧರ್ಮ ಎಲ್ಲವನ್ನೂ ಮೀರಿ ನಿಂತು, ಈ ಉಚಿತ ಸಾಮೂಹಿಕ ವಿವಾಹದಡಿ ಕೇವಲ ನೂರು ಜೋಡಿಗಳಿಗಷ್ಟೇ ಲಭ್ಯವಿರುವ ಅವಕಾಶವನ್ನು ತಮ್ಮತಮ್ಮ ಮಕ್ಕಳಿಗೆ ಸಿಗಲಿ ಎಂದು ತೀವ್ರವಾಗಿ ಬಯಸುವ, ಅದಕ್ಕಾಗಿ ಪ್ರಯತ್ನಿಸುವ, ಸಿಗದಿದ್ದಕ್ಕಾಗಿ ಪರಿತಪಿಸುವ ಒಂದು ಚಿತ್ರದತ್ತ ಗಮನಿಸಿದರೆ ಒಂದು ಪ್ರದೇಶದ ಆರ್ಥಿಕ–ಸಾಮಾಜಿಕ ಸ್ಥಿತಿಗತಿಯ ಚಿತ್ರ ಕಣ್ಣಿಗೆ ಕಟ್ಟುತ್ತದೆ.

ಇದೇ ಮಾತನ್ನು 'ಹನ್ಮ ಎಂಬ ಹುಡುಗ' ಕತೆಯ ಬಗ್ಗೆಯೂ ಹೇಳಬೇಕು. ಆದರೆ ಈ ಕತೆ ಹೆಚ್ಚು ಗಹನವಾದ ಒಂದು ಚಿತ್ರವನ್ನು ಕಟ್ಟಿಕೊಡುವ ಪ್ರಯತ್ನದಲ್ಲಿದೆ. 'ಇಂಗ್ಲೀಷರು ಬರದೇ ಇದ್ದಿದ್ದರೆ ಟಿಪ್ಪು ಸುಲ್ತಾನನೊ, ಸಂಗೊಳ್ಳಿ ರಾಯಣ್ಣನೋ ಆಗಬಹುದಿದ್ದ ಹಳ್ಳಿಯ ಹನ್ಮ' ಹಂಪೆಯ ಜಾತ್ರೆಗೆ ಬಂದಿದ್ದ ಪಂಪನ ಜೊತೆ ಬೆಂಗಳೂರಿಗೆ ಬರುವ ಪ್ರಸಂಗದ ವಿವರವಾದ ನಿರೂಪಣೆಯೇ ನುಗಡೋಣಿಯವರು ಹೇಳಲಿರುವ ಒಡಪಿನ ಹೊಳಹು ತಿಳಿಸುವಂತಿದೆ. ನದಿಯಲ್ಲಿ ಮೊಸಳೆಯ ಜೊತೆಗೆ ಈಜು ಹೊಡೆಯುವ, ಚಿರತೆಯನ್ನು ನಾಯಿಮರಿ ಎಂಬಂತೆ ಹಿಡಿದು ತಿರುಗುವ, ಕೋತಿಯ